**ದಿನಾಂಕ 04.07.2024 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ-ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ಎನ್.ಟಿ. ವಕೀಲರಿಂದಃ-**

ನಾನು ಮತ್ತು 1 ಮತ್ತು 2 ನೇ ವಾದಿ ಅಣ್ಣ-ತಮ್ಮಂದಿರು. 1996 ರಲ್ಲಿ ನಾವು ವಾದಿಯರು ಕುಟುಂಬದಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಸದರಿ ಪಾಲುವಿಭಾಗದಲ್ಲಿ 1 ನೇ ವಾದಿಗೆ ಸರ್ವೆ ನಂಬರ್ಃ 135 ರಲ್ಲಿ 3 ಎಕರೆ 10 ಗುಂಟೆ ಜಮೀನು ಹೋಗಿರುತ್ತದೆ. 1 ನೇ ವಾದಿಯ ಪಾಲಿಗೆ ಹೋದ ಜಮೀನಿನ ದಕ್ಷಿಣ ದಿಕ್ಕಿಗೆ 2 ನೇ ವಾದಿಯ ಭಾಗ ಇರುತ್ತದೆ. ನಿಪಿ-6 ಪಾಲುವಿಭಾಗ ಪತ್ರದಲ್ಲಿ 1 ನೇ ವಾದಿಯ ಭಾಗಕ್ಕೆ ಹೋದ ಜಮೀನಿನ ದಕ್ಷಿಣಕ್ಕೆ ಬಂಡೀದಾರಿ ಎಂದು ಬರೆದಿದೆ ಎಂದರೆ ಸರಿ.

ದಾವೆಯ ಜೊತೆಗೆ ಹಾಜರುಪಡಿಸಿದ ಕಚ್ಚಾ ನಕಾಶೆಯನ್ನು ನಾವೇ ವಕೀಲರಿಗೆ ಮಾಹಿತಿ ನೀಡಿ ಬರೆಸಿರುತ್ತೇವೆ. ಸದರಿ ನಕಾಶೆಯಲ್ಲಿ ಪೂರ್ವ-ಪಶ್ಚಿಮವಾಗಿ ವೇಣುಕಲ್ಲುಗುಡ್ಡಕ್ಕೆ ಹೋಗುವ ರಸ್ತೆ ಇರುತ್ತದೆ ಎಂದರೆ ಸರಿ. ಸದರಿ ರಸ್ತೆಯಿಂದ ಉತ್ತರ-ದಕ್ಷಿಣಕ್ಕೆ ಮತ್ತೊಂದು ರಸ್ತೆಯನ್ನು ಕಾಣಿಸಿರುತ್ತೀರಿ ಎಂದರೆ ನನಗೆ ಗೊತ್ತಿಲ್ಲ. ತಿಮ್ಮಣ್ಣನವರ ಜಮೀನಿನ ಪೂರ್ವಕ್ಕೆ ವೇಣುಕಲ್ಲುಗುಡ್ಡದ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ತಿಮ್ಮಣ್ಣನವರ ಜಮೀನಿನ ದಕ್ಷಿಣ ದಿಕ್ಕಿಗೆ ಬಂಡೀದಾರಿ ಇರುತ್ತದೆ ಎಂದರೆ ಸರಿಯಲ್ಲ. 2 ನೇ ವಾದಿಗೆ ನಿಪಿ-6 ರ ಪ್ರಕಾರ ಸರ್ವೆ ನಂಬರ್ಃ 135 ರಲ್ಲಿ ಬಂದ ಜಮೀನಿನ ಪೂರ್ವ ದಿಕ್ಕಿಗೆ ದಾಸಣ್ಣನವರ ಜಮೀನು ಇರುತ್ತದೆ. ವಿ.ಕೆ.ಗುಡ್ಡದ ರಸ್ತೆಯು 2 ನೇ ವಾದಿಗೆ ಬಂದ ಸದರಿ ಜಮೀನಿನ ಮಧ್ಯದಲ್ಲಿಯೇ ಪೂರ್ವ-ಪಶ್ಚಿಮವಾಗಿ ಹಾದು ಹೋಗಿರುತ್ತದೆ ಎಂದರೆ ಸಾಕ್ಷಿಯು ರಸ್ತೆಯು ಉತ್ತರ-ದಕ್ಷಿಣವಾಗಿ ಹಾದು ಹೋಗಿರುತ್ತದೆ ಎಂದು ಹೇಳುತ್ತಾರೆ.

ದಾವೆಯ ಜೊತೆಗೆ ಸಲ್ಲಿಸಿದ ಕಚ್ಚಾ ನಕಾಶೆಯಲ್ಲಿ ಎ ಬಿ ಸಿ ಡಿ ಎಂದು ತೋರಿಸಿರುವ ದಾರಿಯು ನಿಪಿ-6 ರಲ್ಲಿ 1 ನೇ ವಾದಿಯ ಭಾಗಕ್ಕೆ ಬಂದ ಸರ್ವೆ ನಂಬರ್ಃ 135 ರ ದಕ್ಷಿಣ ದಿಕ್ಕಿನಲ್ಲಿ

ಇರುವ ಬಂಡೀ ದಾರಿ ಎಂದರೆ ಸರಿ. 1 ನೇ ಪ್ರತಿವಾದಿಗೆ ವಿ.ಕೆ. ಗುಡ್ಡ ಗ್ರಾಮದಲ್ಲಿ ಸರ್ವೆ ನಂಬರ್ಃ215/2 ಪಿ1 ನೇದ್ದರಲ್ಲಿ 4 ಎಕರೆ 15 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಜಮೀನು ಇರುತ್ತದೆ, ಆದರೆ ನಿಖರವಾದ ಅಳತೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 213/ಪಿ1 ರಲ್ಲಿ 8 ಗುಂಟೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 3 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 214/ಪಿ1 ರಲ್ಲಿ 3 ಎಕರೆ ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ 4 ನೇ ಪ್ರತಿವಾದಿಗೆ ಸರ್ವೆ ನಂಬರ್ಃ 236/2 ರಲ್ಲಿ 3 ಎಕರೆ 13 ಗುಂಟೆ ಜಮೀನು ಹರಿಯಬ್ಬೆ ಗ್ರಾಮದಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಹರಿಯಬ್ಬೆ ಪಾಳ್ಯದಿಂದ ಹರಿಯಬ್ಬೆ ಗ್ರಾಮಕ್ಕೆ ಹೋಗಲು ಒಂದು ಟಾರ್ ರಸ್ತೆ ಇದೆ ಎಂದರೆ ಸರಿ. ಅದು ಸರ್ವೆ ನಂಬರ್ಃ 127, 129, 114 ಮತ್ತು 135 ರಲ್ಲಿ ಹಾದು ಹೋಗುತ್ತದೆ ಎಂದರೆ ಸರಿ. ಸರ್ವೆ ನಂಬರ್ಃ135 ರ ಪಶ್ಚಿಮ ದಿಕ್ಕಿಗೆ ಸರ್ವೆ ನಂಬರ್ಃ136 ಬರುತ್ತದೆ ಎಂದರೆ ಸರಿ. ಸರ್ವೆ ನಂಬರ್ಃ135 ರಲ್ಲಿ ಹಾದುಹೋಗಿರುವ ಬಂಡೀ ರಸ್ತೆ ಸುಮಾರು 20 ಅಡಿ ಇರುತ್ತದೆ ಎಂದರೆ ಸಾಕ್ಷಿಯು 6 ಅಡಿ ಮಾತ್ರ ಇರುತ್ತದೆ ಎಂದು ಹೇಳುತ್ತಾರೆ ಸದರಿ ಬಂಡೀ ದಾರಿಯು ಸರ್ವೆ ನಂಬರ್ಃ135, 136/3, 136/4, 136/5 ಹರಿಯಬ್ಬೆ ಗ್ರಾಮದ ಜಮೀನುಗಳ ಮೂಲಕ ಹಾದು ಹೋಗಿ ನಂತರ ವೇಣುಕಲ್ಲುಗುಡ್ಡ ಗ್ರಾಮದ ಸರ್ವೆ ನಂಬರ್ಃ 219/2, 210/2, 210/3, 210/4, 211/1, 212, 213, 214, 215, 216 ಜಮೀನುಗಳಲ್ಲಿ ಹಾದು ಹೋಗಿ ನಂತರ ಕೆಂಚಯ್ಯನಹಟ್ಟಿ ಗ್ರಾಮಕ್ಕೆ ಹೋಗುತ್ತದೆ ಎಂದರೆ ಸರಿಯಲ್ಲ.

ಕೆಂಚಯ್ಯನಹಟ್ಟಿ ಗ್ರಾಮದಲ್ಲಿ ತುಂಬಾ ಜನರು ಇರುವುದಿಲ್ಲ, ಕೇವಲ 5-6 ಮನೆಗಳು ಮಾತ್ರ ಇರುತ್ತವೆ. ಸದರಿ ಹಟ್ಟಿಯ ಪಕ್ಕದಲ್ಲಿ ದಕ್ಷಿಣದ ಕಡೆಗೆ ವೀರನಾಗಮ್ಮ ದೇವಸ್ಥಾನ ಇರುತ್ತದೆ ಎಂದರೆ ಸರಿ. ಕೆಂಚಯ್ಯನಹಟ್ಟಿಯಿಂದ ವೀರನಾಗಮ್ಮನ ದೇವಸ್ಥಾನಕ್ಕೆ ಹೋಗಬೇಕಾದರೆ 1 ನೇ ವಾದಿಯ ಭಾಗಕ್ಕೆ

ಬಂದ ಜಮೀನಿನಲ್ಲಿ ಹಾದು ಹೋಗಿರುವ ಬಂಡೀ ರಸ್ತೆಯಲ್ಲಿಯೇ ಹೋಗಬೇಕು ಎಂದರೆ ಸರಿಯಲ್ಲ. ದಾರಿ ವಿಷಯದ ಬಗ್ಗೆ ಹಿರಿಯೂರಿನ ತಹಶೀಲ್ದಾರರು ಯಾವತ್ತೂ ಸಹ ಸ್ಥಳಕ್ಕೆ ಬಂದಿರುವುದಿಲ್ಲ ಆದರೆ ಆದೇಶ ಮಾಡಿರುತ್ತಾರೆ. ಸದರಿ ಆದೇಶವನ್ನು ದಿನಾಂಕಃ06.03.2020 ರಂದು ಮಾಡಿರುತ್ತಾರೆ, ಸದರಿ ಆದೇಶದಲ್ಲಿ 1 ನೇ ವಾದಿಯ ಭಾಗಕ್ಕೆ ಬಂದ ಸರ್ವೆ ನಂಬರ್ಃ 135 ಜಮೀನಿನಲ್ಲಿ ಬಂಡೀದಾರಿ ಇರುತ್ತದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಬಂಡೀ ರಸ್ತೆಯು 3 ¾ ವರ್ಷದಿಂದ ಇರುತ್ತದೆ.

ತಹಶೀಲ್ದಾರ್ ರವರು ಸುಮಾರು 60-70 ವರ್ಷಗಳಿಂದ ರೂಢಿಗತ ದಾರಿ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆದೇಶ ತಪ್ಪಾಗಿರುತ್ತದೆ. ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಈ ದಾವೆಯನ್ನು ಸಲ್ಲಿಸುವಾಗ ಬಂಡೀದಾರಿ ಇತ್ತು. ಬಂಡೀದಾರಿ ಇರುವ ವಿಷಯದ ಬಗ್ಗೆ ನಮ್ಮ ವಕೀಲರಿಗೆ ಹೇಳಿರುತ್ತೇವೆ. ಸದರಿ ಬಂಡೀದಾರಿಯನ್ನು ಪ್ರತಿವಾದಿಯರೂ ಸಹ ಈಗ ಉಪಯೋಗಿಸುತ್ತಿರುತ್ತಾರೆ ಎಂದರೆ ಸರಿ. ಸದರಿ ದಾರಿಯನ್ನು ಪ್ರತಿವಾದಿಯರು 3 ¾ ವರ್ಷದಿಂದ ಬಳಸುತ್ತಿದ್ದಾರೆ. ಸದರಿ ಬಂಡೀದಾರಿಯಲ್ಲಿ ವಾದಿಯರು ಗುಂಡಿ ತೋಡಿರುತ್ತೇವೆ ಎಂದರೆ ಸರಿ. ಆಗ ಕೆಂಚಯ್ಯನಹಟ್ಟಿ ಗ್ರಾಮಸ್ಥರು ಹಿರಿಯೂರು ತಹಶೀಲ್ದಾರ್ ಬಳಿ ದೂರು ನೀಡಿರುತ್ತಾರೆ ಎಂದರೆ ಸರಿ. ಆಗ ತಹಶೀಲ್ದಾರ್ ರವರು ಸ್ಥಳಕ್ಕೆ ಬಂದು ತನಿಖೆ ಮಾಡಿ ಗುಂಡಿ ಮುಚ್ಚಿಸಿ ಗ್ರಾಮಸ್ಥರಿಗೆ ಓಡಾಡಲು ಅವಕಾಶ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ.

ನಿಪಿ-6 ರ ಪ್ರಕಾರ ಸರ್ವೆ ನಂಬರ್ಃ 135 ರಲ್ಲಿ ನನ್ನ ಭಾಗಕ್ಕೆ 2 ಎಕರೆ 17 ಗುಂಟೆ ಜಮೀನು ಬಂದಿರುತ್ತದೆ. ಅದರ ಪೂರ್ವಕ್ಕೆ- ದಾಸಣ್ಣನ ಜಮೀನು, ಪಶ್ಚಿಮಕ್ಕೆ- 4 ನೇ ಪ್ರತಿವಾದಿಯ ಭಾಗ ಅಂದರೆ ಸರ್ವೆ ನಂಬರ್ಃ136, ಉತ್ತರಕ್ಕೆ- 1 ನೇ ವಾದಿಯ ಭಾಗ, ದಕ್ಷಿಣಕ್ಕೆ- 2 ನೇ ವಾದಿಯ ಭಾಗ ಬಂದಿರುತ್ತದೆ. ನನ್ನ ಮತ್ತು 1 ನೇ ವಾದಿಯ ಜಮೀನಿನ ಮಧ್ಯಭಾಗದಲ್ಲಿ ಬಂಡೀದಾರಿ ಇರುತ್ತದೆ

ಎಂದರೆ ಸರಿ. ಸದರಿ ಬಂಡೀದಾರಿಯನ್ನು ಎಲ್ಲಾ ಸಾರ್ವಜನಿಕರು ಬಳಸುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ 1 ನೇ ವಾದಿಯ ಭಾಗಕ್ಕೆ ಬಂದ ಜಮೀನಿನ ದಕ್ಷಿಣ ದಿಕ್ಕಿನಲ್ಲಿರುವ ಬಂಡೀದಾರಿಯನ್ನು ಹೊರತುಪಡಿಸಿ ಅವರ ಜಮೀನುಗಳಿಗೆ ಹೋಗಲು ಬೇರೆ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಅನಾದಿಕಾಲದಿಂದಲೂ ಸದರಿ ಬಂಡೀದಾರಿಯನ್ನು ಬಳಸುತ್ತಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಎಂದು ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹಿರಿಯೂರು.